ಆಕ್ಸಿಡೆಂಟ್ ಆದಾಗ ಫೈರ್ ಹೈರೌಂಡ್ಸ್ ಇರಬೇಕಾಗುತ್ತದೆ. ಅಲ್ಲಿ ಹೈರೌಂಡ್ಸ್ ಇದ್ದರೆ ನೀರನ್ನು ತೆಗೆದಂಕೊಂಡು ಬೆಂಕಿಯನ್ನು ಅತಿ ಶೀಘ್ರದಲ್ಲಿ ಶಮನ ಮಾಡಬಹುದು, ಅದು ಇರಲಿಲ್ಲ. ಈಗ ಫೈರ ಹೈಕ್ಲಾಂಡ್ಸ್ ಮಾಡುವುದರ ಜೊತೆಗೆ ಓವರ್‌ಹೆಡ್ ಟ್ಯಾಂಕನ್ನು ಕಟ್ಟುತಕ್ಕ ಕೆಲಸವು ಆಗ ಬೇಕೆಂದು ವ್ಯವಸ್ಥೆ ಮಾಡುತ್ತಿದ್ದೇವೆ. ಬಹಳ ಹಿಂದೆ ಅಲ್ಲಿ ಏನು ಎಲೆಕ್ಟ್ರಿಕ್ ವೈರಿಂಗ್ ಮಾಡಿದ್ದರಂ ಅದು ಮೇಲ್ಬಾಗದಲ್ಲಿ ಮಾಡಿರತಕ್ಕದ್ದು, ಕೆ. ಇ. ಬಿ. ಯವರ ಜೊತೆಯಲ್ಲಿ ಚರ್ಚೆಮಾಡಿ ಅವರು ಅಂಡರ್ ಗ್ರೌಂಡ್ ಕೇಬಲನ್ನು ಹಾಕಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅವರು ಕೂಡ ಕೆಲಸ ಪ್ರಾರಂಭ ಮಾಡುತ್ತಾರೆ. ಏಕಕಾಲದಲ್ಲಿ ಕೆಲಸಗಳನ್ನು ಪ್ರಾರಂಭ ಮಾಡುತ್ತೇವೆ. ಆದಷ್ಟು ಜಾಗ್ರತೆ ಈ ಕೆಲಸಕಾರ್ಯಗಳನ್ನು ಪೂರ್ಣ ಮಾಡುತ್ತೇವೆ. ಮುಂದೆ ಇಂಥ ದುರಂತ ಆಗಬಾರದು ಎಂಬುದು ನಮ್ಮ ಅಭಿಲಾಷೆ ಕಾರ್ಪೊರೇಷನ್ನಿಗೆ ಅರೂವರೆ ಲಕ್ಷ ರೂಪಾಯಿ ಏನು ಹಾನಿಯಾಗಿದೆ ಅದಕ್ಕೆ ಇನ್‌ಶ್ಯೂರೆನ್ಸ್ ಮಾಡಿಸಿದ್ದರೆ ಒಳ್ಳೆಯದಿತ್ತು. ಇನ್‌ಶ್ಯೂರೆನ್ಸ್ ಮಾಡಿಸಿ ಕೊಳ್ಳಬೇಕೆಂದು ಡೈರೆಕ್ಷನ್ ಕೊಟ್ಟಿದ್ದೇನೆ. ಇದೇ ತಿಂಗಳ ೨೬ನೇ ತಾರೀಖು ಪರಿಹಾರ ಕೊಡುತ್ತೇವೆ, ಮತ್ತು ಆದಷ್ಟು ಜಾಗ್ರತೆ ಕೆಲಸ ಕಾರ್ಯಗಳನ್ನು ಮುಗಿಸುತ್ತೇವೆಂದು ಹೇಳಿ ನನ್ನ ಮಾತು ಮುಂಗಿಸುತ್ತೇನೆ.

ii) ಬೆಂಗಳೂರಿನ ರಾಜಾಮಿಲ್‌ನಲ್ಲಿ ಸಂಭವಿಸಿದ ಅಗ್ನಿ ಅನಾಹುತದ ಬಗ್ಗೆ

ಶ್ರೀ ಎಸ್. ರಮೇಶ್ (ಉತ್ತರಹಳ್ಳಿ),—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಬೆಂಗಳೂರು ನಗರದ ರಾಜಾ ಮಿಲ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

SRI M. RAJASHEKAR MURTHY (Minister for Finance).—Mr.Speaker Sir, With your permission I wish to make the following.—

At about 7-30 p: m· on 18-1-1990

ಶ್ರೀ ವಾಟಾಳ್ ನಾಗರಾಜ್.—ಆಗಲೇ ಕನ್ನಡದಲ್ಲಿ ಉತ್ತರ ಶುರು ಮಾಡಿದಿರಿ, ಈಗ ಇಂಗ್ಲಿಷ್‌ನಲ್ಲಿ ಶುರು ಮಾಡುತ್ತಿದ್ದೀರಿ ಒಬ್ಬರಿಗೆ ಕನ್ನಡದಲ್ಲಿ ಉತ್ತರ, ಮತ್ತೊಬ್ಬರಿಗೆ ಇಂಗ್ಲೀಷಿನಲ್ಲಿ ಉತ್ತರ ಈ ದ್ವಂದ್ವ ನೀತಿ ಏಕೆ ?

ಶ್ರೀ ಎಂ ಪಿ. ವೆಂಕಟೇಶ್.—ಕನ್ನಡದಲ್ಲೇ ಹೇಳಿಕೆ ನೀಡಬೇಕು, ಸಚಿವಾಲಯದಲ್ಲಿ ಕನ್ನಡದಲ್ಲಿ ತಯಾರಾದ ಪ್ರತಿ ಇರಬೇಕು, ದಯವಾಡಿ ಅದನ್ನು ತರಿಸಿ ಕನ್ನಡದಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಈ ದ್ವಂದ್ವ ನೀತಿ ಸರಿಯಲ್ಲ, ದಯವಿಟ್ಟು ಇಂಥದ್ದೆಲ್ಲ ಬೇಡಿ. ಒಂದು ಸಾರಿ ಇಂಗ್ಲೀಷ್, ಇನ್ನೊಂದು ಸಾರಿ ಕನ್ನಡ, ಇದೇನಿದು ? ಮೊದಲು ಕನ್ನಡದಲ್ಲಿ ಹೇಳಿದಿರಿ. ಈಗಲೂ ಕನ್ನಡದಲ್ಲೇ ಹೇಳಿ.

ಶ್ರೀ ಕೆ. ಜೆ. ಜಾರ್ಜ್.—ಇಂಗ್ಲಿಷ್‌ನಲ್ಲಿ ಓದಬಾರದೆಂದು ರೂಲ್ಸ್ ಇದೆಯೆ ?

ಅಧ್ಯಕ್ಷರು.—ಇಲ್ಲ.

ಶ್ರೀ ಕೆ. ಜೆ. ಜಾರ್ಜ್.—ಅದನ್ನು ಮಾನ್ಯ ಸದಸ್ಯರು ಹೇಗೆ ಅಜ್ಜಕ್ಟ್ ಮಾಡುತ್ತಾರೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ರಾಜ್ಯದಲ್ಲಿ ಚಿತ್ತೂರಿನವರು, ಕೇರಳದವರು, ತಮಿಳು ನಾಡಿನವರು ಎಲ್ಲರೂ ಬರಬಹುದು. ಏನು ಬೇಕಾದರೂ ಹೇಳಬಹುದು. ಯಾವ ಭಾಷೆಯಲ್ಲಿ ಬೇಕಾದರೂ ಹೇಳಬಹುದು. ನಮ್ಮ ರಾಜ್ಯದ ಪರಿಸ್ಥಿತಿ ಎಲ್ಲಿಗೆ ಬಂದಿದೆ ನೋಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಕನ್ನಡದ ಬಗ್ಗೆ ಅಭಿಮಾನ ಇರಬೇಕು, ದುರಭಿಮಾನ ಬೇಡ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಕನ್ನಡದಲ್ಲೇ ಹೇಳಿಕೆ ಮಾಡಬೇಕೆಂದು ತಾವು ಆದೇಶ ಕೊಡಿ.

ಅಧ್ಯಕ್ಷರೆ.—ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ಗಮನ ಸೆಳೆಯುವ ಸೂಚನೆ ಇರುವುದು ರಮೇಶ್ ಅವರದು. ಅವರ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಅದಕ್ಕೆ ಅವರ ಆಕ್ಷೇಪಣೆ ಏನೂ ಇಲ್ಲ. ಆದ್ದರಿಂದ ಮುಂದುವರಿಸಬಹುದು.

ಶ್ರೀ ವಾಟಾಳ್ ನಾಗರಾಜು.—ಇನ್ನು ಮುಂದಾದರೂ ಕನ್ನಡದಲ್ಲಿ ಹೇಳಿಕೆ ಕೊಡುವಂತೆ ಹೇಳಿ.

ಶ್ರೀ ಎಸ್. ರಮೇಶ್.—ನನಗೆ ಯಾವುದರಲ್ಲಿ ಹೇಳಿದರೂ ಪರ್ವಾಗಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ರಮೇಶ್ ಅವರಿಗೆ ಇಂಗ್ಲೀಷಿನಲ್ಲೇ ಹೇಳಿಕೆ ಬೇಕಂತೆ, ಹೇಳಲಿ.

† SRI M. RAJASHEKARA MURTHY (Minister for Finance).—Mr. Speaker Sir, At about 7.50 p.m. on 18-1-1990. fire was noticed in old Ring Frame No. 7 in the Mysore Spinning and Manufacturing Mills, at Malleswaram, Bangalore. Due to fluff on the Ring frame fire immediateley spread and the Security personnel, Supervisors and Workers tried to put off the fire with available fire fighting equipments. Electricity went of and due to darkness and smoke nothing was vissible. Immediately the fire brigade was informed. In view of the intensity of fire all workers were called out. The century old wooden flooring soaked with machine oils and rafters caught fire and become very difficult to control. Added to this, a heavy wind was blowing which aggravated the fire. The fire was noticed first by the actine Ling Jobber 3641 Chittibabu,who informed Mr. Vishwanth, Asst. Spinning Manager, Asst. Spinning Manager went there immediately and six fire extinguishers were used to extinguish the fire. The fire is suspected to have been caused by a shost circut.

Within minutes the fire fighting personnel arrived and started extinguishing the fire. But the fire in the old building had extensively damaged the machines and builbing and become very difficult to control and extinguish, Apart from the fire fighting equipment available in Bangalore, fire engines from Tumkur, Kolar, Mandya and Mysore were also called. In all above 24 fire engines had arrived. Howeve with the action taken by the fire brigde the new building, housing the IAS & LR Ring Frames, Blow Room, and also weaving departments were saved by spraying water over the roof continuously to prevent fire from spreading to these departments. By 12,00 midnight the fire was controlled but the fire fighting personnel worked throughout the night to extinguish the fire, and the operation was continued in the morning of 19-1-1990 also.

There was no loss of life or injury to anybody. There was only loss of property.

The total value of loss is being estimated by Insurance Company (New India Assurance Co. Ltd) after survey. The insured value of the burnt machine and building is around Rs. 1.65 crores.

ಶ್ರೀ ಎಸ್ ರಮೇಶ್.—ಮಾನ್ಯ ಅಧ್ಯಕ್ಷರೆ ಈಗ ಏನಾಗಿದೆ ಎಂದರೆ, ಇನ್ಷೂರೆನ್ಸ್ ಕಂಪನಿಯವರ ಪ್ರಕಾರ ಕಾರ್ಖಾನೆಗೆ ಅಂದಾಜು ೨ ಕೋಟಿ ರೂಪಾಯಿ ಹಾನಿಯಾಗಿದೆ ಎಂದು ಹೇಳಿದ್ದಾರೆ. ಆದರೆ ನಿಜ ಪರಿಸ್ಥಿತಿ ಸುಮಾರು ೨೦ ಕೋಟಿ ರೂಪಾಯಿನಷ್ಟು ಹಾನಿಯಾಗಿದೆ. ಅಲ್ಲಿ

೧೩೦೦ ಜನ ರೆಗ್ಯುಲರ್ ಎಂಪ್ಲಾಯೀಸ್ ಇದ್ದಾರೆ, ೫೦೦ ಜನ ಟೆಂಪೊರರಿ ಎಂಪ್ಲಾಯೀಸ್ ಇದ್ದಾರೆ. ಇವತ್ತಲ್ಲ ಬೇರೆ ಕಡೆಯಿಂದ ಕಚ್ಚಾದಾರ ತಂದು ಕಾರ್ಖಾನೆ ಪ್ರಾರಂಭ ಮಾಡಿದರೂ ೫೦೦–೬೦೦ ಜನರಿಗೆ ಕೆಲಸ ಸಿಗುತ್ತದೆ. ಪರ್ಮನೆಂಟ್ ಎಂಪ್ಲಾಯೀಸ್‌ಗೆ ಕೆಲಸ ಇರುವುದಿಲ್ಲ. ಟೆಂಪೊರರಿ ವರ್ಕರ್ಸ್ ರಸ್ತೆಗೆ ಬರತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ರಾಜ್ಯ ಸರ್ಕಾರದವರು ಮಧ್ಯೆ ಪ್ರವೇತಿಸಿ, ಕಾರ್ಮಿಕರಿಗೆ ತೊಂದರೆಯಾಗದ ರೀತಿಯಲ್ಲಿ ಆಡಳಿತ ವರ್ಗದವರ ಜೊತೆ ಸಮಾಲೋಚಿಸಿ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕು. ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ನಿನವರು ಯಾವರೀತಿ ಆಡಳಿತ ನಡೆಸುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಮಿನರ್ವ ಮಿಲ್ಲನ್ನು ಯಾವುದೋ ಸಣ್ಣ ಕಾರಣಕ್ಕಾಗಿ ಮುಚ್ಚಿದ್ದರು, ಹಿಂದೆ ಮುಖ್ಯಮಂತ್ರಿಗಳ ಒತ್ತಾಯದಿಂದ ಮತ್ತೆ ಕೆಲಸ ಕೊಟ್ಟಿದ್ದರು. ಆದ್ದರಿಂದ ರಾಜ್ಯ ಸರ್ಕಾರ ಅದಕ್ಕೆ ಅವಕಾಶ ಕೊಡದೆ ಎಲ್ಲ ಕಾರ್ಮಿಕರಿಗೆ ಅಂದರೆ ಟೆಂಪೊರರಿ ಮತ್ತು ಪರ್ಮನೆಂಟ್ ಎಂಪ್ಲಾಯೀಸ್‌ಗೆ ಪರಿಹಾರ ಕೊಡಬೇಕು, ಮತ್ತು ಅವರಿಗೆ ಯಾವ ತೊಂದರೆಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಈ ರಾಜಾಮಿಲ್‌ನ ವ್ಯವಸ್ಥಾಪಕ ಮಂಡಲಿ ಹಾಗೂ ಕಾರ್ಮಿಕರ ಮಧ್ಯೆ ಏನೊಂದು ಜಿಜ್ಞಾಸೆ ಇತ್ತು ಅದನ್ನು ಈ ದೇಶದ ಹಿಂದಿನ ಪ್ರಧಾನ ಮಂತ್ರಿಗಳ ಮೂಲಕ ಪರಿಹಾರ ಮಾಡಲಾಯಿತು. ಇವತ್ತು ಅಲ್ಲಿ ಮಾನ್ಯ ರಮೇಶ್ ಅವರು ಹೇಳಿದ ರೀತ್ಯಾ ಸುಮಾರು ೨೨ ಕೋಟಿ ರೂಪಾಯಿ ನಷ್ಟವಾಗಿದೆ. ಅಲ್ಲಿ ಸ್ಪಿನ್ನಿಂಗ್ ಸೆಕ್ಷನ್ ಪೂರ್ತಿ ಬೆಂಕಿಗೆ ಆಹುತಿ ಆಗಿದೆ. ಅಲ್ಲಿ ಬರೀ ವೀವಿಂಗ್ ಸೆಕ್ಷನ್ ಮಾತ್ರ ಉಳಿದಿದೆ. ಇವತ್ತು ಅಲ್ಲಿನ ಕಾರ್ಮಿಕರಲ್ಲಿ ಏನೊಂದು ಭಾವನೆ ಮೂಡಿದೆ ಎಂದರೆ, ಇದು ಒಂದು ರೀತಿಯ ಮೇನೇಜ್‌ಮೆಂಟ್ ಮಿಸ್‌ಥೀಫ್ ಇರಬಹುದು, ಆವರು ನಮ್ಮನ್ನು ಹೊರಗೆ ಹಾಕುವ ಪ್ರಯತ್ನ ಮಾಡುತ್ತಾ ಇರಬಹುದು ಎನ್ನುವ ಭಾವನೆ ಬಂದಿದೆ. ಇದಕ್ಕೆ ಪೂರಕವಾಗಿ ಕೆಲವು ಪತ್ರಿಕೆಗಳಲ್ಲಿ, ಇದು ಒಂದು ಮೋಟಿವೇಟೆಡ್ ಮಿಸ್‌ಥೀಫ್ ಮೇನೇಜ್‌ಮೆಂಟ್ ಪರವಾಗಿ ನಡೆದ ಒಂದು ಅನಾಹುತ ಎನ್ನುವ ಭಾವನೆ ಬರುವಂತೆ ಬಂದಿದೆ. ಈ ಬಗ್ಗೆ ಒಂದು ನ್ಯಾಯಾಂಗ ತನಿಖೆ ಆಗಬೇಕೆಂದು ಈ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ನ್ಯಾಯಾಂಗ ತನಿಖೆ ಎಂದು ಹೇಳುವಾಗ ಇದನ್ನು ಲಘುವಾಗಿ ಹೇಳುತ್ತಾ ಇಲ್ಲ. ಬಹಳ ಕಡೆ ಈ Fire accidents are Primarily because of the involvement of the management. ಇದು ಒಂದು ಇನ್‌ಷೂರನ್ಸ್ ತೆಗೆದುಕೊಳ್ಳುವುದಕ್ಕೆ ಅಥವಾ ಏಸ್ಸಾಬ್ಲಿಷ್‌ಮೆಂಟ್ ಕ್ಲೋಸ್ ಮಾಡುವುದಕ್ಕೆ, the Deputy Secretary, Textiles Department, Government of India came down here for an on the spot assesment. ಇವತ್ತು ಏನು ಅಲ್ಲಿ ಮಿಲ್ಲಿನ ಪರಿಕರಗಳು ನಷ್ಟ ಆಗಿದೆ ಅದಕ್ಕೆ ೧.೬೫ಕೋಟಿ ರೂಪಾಯಿಗಳಿಗೆ ಇನ್ಶೂರೆನ್ಸ್ ಮಾಡಲಾಗಿದೆ. ಅಷ್ಟು ಹಣ ಬಂದರೂ ಕೂಡ ಇವರು ೧೨–೧೩ ಕೋಟಿ ರೂಪಾಯಿಗಳನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ. ಅದು ನೂರಾರು ವರ್ಷಗಳ ಕಟ್ಟಡ. ಈ ಕಟ್ಟಡವನ್ನು ಪೂರ್ಣ ಡಿಮೋಲಿಷ್ ಮಾಡಬೇಕಾಗುತ್ತದೆ, ಹೊಸ ಕಟ್ಟಡವನ್ನು ಕಟ್ಟಬೇಕಾಗುತ್ತದೆ. ಎಲ್ಲ ಹಣದ ವ್ಯವಸ್ಥೆಯನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಮಾಡಿದರೂ ಸಹಾ ಇನ್ನೂ ಒಂದೂವರೆ ವರ್ಷದಲ್ಲಿ ಪುನ: ಅಲ್ಲಿ ಮೊದಲಿನ ಸ್ಥಿತಿಗೆ ತರಲು ಸಾಧ್ಯವಿಲ್ಲ. ಈ ಒಂದೂವರೆ ವರ್ಷಗಳ ಅವಧಿಯಲ್ಲಿ ಏನೆಲ್ಲಾ ಆಗಬಹುದೆಂಬುದನ್ನು ಗಹನವಾಗಿ ನೋಡಬೇಕಾಗುತ್ತದೆ. ಇನ್ನೊಂದು ಮಾತನ್ನು ಮಾನ್ಯ ರಮೇಶ್‌ರವರು ಹೇಳಿದರು. ಇವತ್ತು ಕಚ್ಚಾದಾರ ತಂದು ವೀವಿಂಗ್ ಸೆಕ್ಷನ್ ಪ್ರಾರಂಭ ಮಾಡಿದರೂ ಕೂಡಾ ೫೦೦ ಜನರಿಗೆ ಕೆಲಸ ಸಿಗುತ್ತದೆ. ಇದರಿಂದ ಅಲ್ಲಿನ ಕಾರ್ಮಿಕರಲ್ಲಿ ಅಸಮಾಧಾನ ಆಗುತ್ತದೆ. It is a very serious matter. The management may be gulity or otherwise, but let there be a judicial enquiry or a Magisterial enquiry into the fire accident. ಏಕೆಂದರೆ, ಇಂತಹ ಒಂದು ವ್ಯವಸ್ಥೆಯನ್ನು ನಾವು ಆಗಾಗ ನೋಡುತ್ತಿರುತ್ತೀರಿ. ಹೋಟೆಲಿಗೆ ಬೆಂಕಿ ಬಿದ್ದಾಗ ಅಲ್ಲಿ ಯಾರೂ ಇರುವುದಿಲ್ಲ. ಸಿಲ್ಕ್ ಫ್ಯಾಕ್ಟರಿಗೆ ಬೆಂಕಿ ಬಿದ್ದಾಗ ಅಲ್ಲಿ ಯಾರೂ ಇರುವುದಿಲ್ಲ. It is hand in glove operation ಎಂದು ಕಾಣುತ್ತದೆ. ಈ ಅಗ್ನಿ ದುರಂತದಿಂದ ೧೭೦೦ ಕಾರ್ಮಿಕರಿಗೆ ಅನ್ಯಾಯವಾಗಿದೆ. ಆದ್ದರಿಂದ ಈ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕೆಂದು ಇದರಿಂದ ಪೂರ್ಣ ಸತ್ಯಾಸತ್ಯತೆ ಹೊರಬೇಕೆಂದು, ಕಾರ್ಮಿಕ ವರ್ಗಕ್ಕೆ ನ್ಯಾಯ ದೊರಕಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಅಧ್ಯಕ್ಷರೇ, ಈಗ ಮಾತನಾಡಿದಂಥ ಮಾನ್ಯ ಸದಸ್ಯರು ಅಲ್ಲಿ ಏನೋ ಮಿಸ್‌ಥೀಫ್ ನಡೆದಿರಬಹುದೆಂದು ಹೇಳಿದ್ದಾರೆ. ಮತ್ತೆ ಇಲ್ಲಿ ಕೆಲಸ ಪ್ರಾರಂಭ ಮಾಡಿದರೂ ಕೇವಲ ೫೦೦ ಮಂದಿಗೆ ಕೆಲಸ ಸಿಕ್ಕಿತ್ತದೆ, ಉಳಿದವರಿಗೆ ತೊಂದರೆಯಾಗುತ್ತದೆ. ಅದಕ್ಕೆ

ಏನಾದರೂ ಏಪರ್ಾಡಿ ಮಾಡಬೇಕೆಂದು ಹೇಳಿದ್ದಾರೆ. ಮತ್ತೆ ಈಗಿರುವ ಪೂರ್ಣ ಕಟ್ಟಡವನ್ನು ತೆಗೆದು ಹೊಸ ಕಟ್ಟಡ ನಿರ್ಮಿಸಬೇಕೆಂದು ಹೇಳಿದ್ದಾರೆ. ಈ ಮೈಸೂರು ಸ್ಪಿನ್ನಿಂಗ್ ಮಿಲ್ ಮೊದಲು ಪಾಸಗೀ ಕ್ಷೇತ್ರದಲ್ಲಿ ಇದ್ದ ಒಂದು ಕಾರ್ಖಾನೆ. ಹಿಂದೆ ಈ ಕಾರ್ಖಾನೆಯು ಬಾಗಿಲು ಮುಚ್ಚಿದ್ದರಿಂದ ನಾನು ಹಿಂದೆ ಕೈಗಾರಿಕಾ ಮಂತ್ರಿ ಆಗಿದ್ದ ಸಮಯದಲ್ಲಿ ಕೇಂದ್ರಕ್ಕೆ ಬರೆದು ಇದನ್ನು ಎನ್.ಟಿ.ಸಿಗೆ ವಹಿಸಬೇಕೆಂದು ಶಿಫಾರಸ್ಸು ಮಾಡಿದ್ದೆ. ಆ ಪ್ರಕಾರ ಈ ಕಂಪನಿಯನ್ನು ಎನ್.ಟಿ.ಸಿಯವರು ತೆಗೆದುಕೊಂಡು ಅವರು ನಡೆಸುತ್ತಿದ್ದಾರೆ. ಆದರೆ ಈಗ ಆ ಫ್ಯಾಕ್ಟರಿ ಎನ್.ಟಿ.ಸಿಯ ಪ್ರಾಪರ್ಟಿ. ಅಥವಾ ಪರೋಕ್ಷವಾಗಿ ಇದು ಕೇಂದ್ರ ಸರ್ಕಾರದ ಆಸ್ತಿ ಎಂದೂ ಸಹ ನಾವು ಹೇಳಬಹುದು. ಇಲ್ಲಿ ನಾವು ನೇರವಾಗಿ ಯಾವರೀತಿ ಪ್ರವೇಶ ಮಾಡಬೇಕೆನ್ನುವುದು ನನಗೆ ಕಾಣುತ್ತಿಲ್ಲ. ಏಕೆಂದರೆ ಆ ಆಸ್ತಿ ನಮ್ಮದಲ್ಲ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಸಮಸ್ಯೆಯನ್ನು ಬಗೆಹರಿಸತಕ್ಕವರು ಕೇಂದ್ರ ಸರ್ಕಾರದವರು ಮತ್ತು ಎನ್.ಟಿ.ಸಿ. ಅವರು ಇದ್ದಾರೆ. ಮುಂದೆ ಏನು ಮಾಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಳ್ಳುವವರು ಅವರೇ. ಆದರೆ ನಾವು ಎನ್.ಟಿ.ಸಿ.ಯವರಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಬರೆಯಬಹುದು. ಏನು ತೊಂದರೆಗಳಿವೆ ಅವುಗಳನ್ನು ಪರಿಹಾರ ಮಾಡಲಿಕ್ಕೆ ಅಲ್ಲಿನ ಕಾರ್ಮಿಕರಿಗೆ ಯಾವುದೇ ವಿಧವಾದ, ತೊಂದರೆಯಾಗದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ ಯೆಂದು ನಾವು ಬರೆಯಬಹುದು. ನಾವು ಬರೆಯುತ್ತೇವೆ. ಮಾನ್ಯ ಸದಸ್ಯರು ಅಲ್ಲಿ ವಿಸ್ಚೀಫ್ ಆಗಿದೆ ಯೆಂದು ಹೇಳಿದ್ದಾರೆ, ಅದರ ಬಗ್ಗೆ ಇನ್ವೆಸ್ಟಿಗೇಷನ್ ಮಾಡಿಸುತ್ತೇವೆ ಅದರ ಸತ್ಯಾಂಶ ಏನು ಎನ್ನುವುದನ್ನು ನಾವು ತಿಳಿದುಕೊಳ್ಳುತ್ತೇವೆ. ಮತ್ತೆ ಪ್ರಮುಖ್ಯವಾಗಿ ನಮ್ಮ ಜೀವರಾಜ ಆಳ್ವರವರು, ಎಲ್ಲಿರತಕ್ಕ ಪೂರ್ಣ ಹಳೆಯ ಕಟ್ಟಡವನ್ನು ನೆಲಸಮ ಮಾಡಿ ಹೊಸ ಕಟ್ಟಡ ಮಾಡಬೇಕೆಂದು ಹೇಳಿದ್ದಾರೆ. ಟೆಕ್ಸ್‌ಟೈಲ್ಸ್ ಫ್ಯಾಕ್ಟರಿಯನ್ನು ಹೊಸದಾಗಿ ಮಾಡಬೇಕಾದರೆ, ಹಳೆಯ ಯಂತ್ರಗಳನ್ನೆಲ್ಲ ತೆಗೆದು ಬಿಸಾಡಿ ಹೊಸದಾಗಿರತಕ್ಕ ಆಟೋಮೆಟಿಕ್ ಲೂಮ್ಸ್ ಆಗಲಿ ಸ್ಪಿನ್ನಿಂಗ್ ಆಗಲಿ ಲೇಟೇಸ್ಟ್ ಎಕ್ಯುಪ್‌ಮೆಂಟ್ಸ್‌ಗಳನ್ನು ಹಾಕಬೇಕಾದರೆ ಸುಮಾರು ೪೦-೫೦ ಕೋಟಿ ರೂಪಾಯಿಗಳಿಂತ ಕಡಿಮೆ ಯಾಗುವುದಿಲ್ಲ. ಈಗ ಅವರು ಹೊಸದಾಗಿ ಹಾಕಬೇಕೆಂದು ಏನು ಸಲಹೆ ಕೊಟ್ಟಿದ್ದಾರೆ. ಅಷ್ಟು ಬಂಡವಾಳ ಹಾಕುವುದಕ್ಕೆ ಎನ್.ಟಿ.ಸಿ.ಯವರಿಗೆ ಸಾಧ್ಯವಿಲ್ಲ. ತಮಗೆ ಗೊತ್ತಿರುವ ಹಾಗೆ, ಎನ್.ಟಿ.ಸಿ.ಗೆ ಅಕ್ಯುಮಿಲೇಟೆಡ್ ಲಾಸ್ ಈಗ ಸುಮಾರು ೫೦೦ ಕೋಟಿಗಿಂತ ಜಾಸ್ತಿಯಾಗಿದೆ. ಅವರು ಪ್ರತಿವರ್ಷವೂ ಲಾಸ್ ಮಾಡಿಕೊಂಡು ಲಾಸ್‌ನಲ್ಲಿ ರನ್ ಮಾಡುತ್ತಿದ್ದಾರೆ. ಆದ್ದರಿಂದ ಅವರು ಮಾಡಲಿಕ್ಕಾಗುವುದಿಲ್ಲ. ನಾನು ಸಲಹೆ ಮಾಡುವುದೇನೆಂದರೆ, ನನ್ನ ಅನುಭವದಲ್ಲಿ ಹೇಳುವುದಾದರೆ, ಬಹಳ ಕ್ರೌಡೆಡ್ ಜಾಗದಲ್ಲಿ ಈ ಫ್ಯಾಕ್ಟರಿ ಇದೆ. ಈ ಫ್ಯಾಕ್ಟರಿಯನ್ನು ಅಲ್ಲಿಂದ ತೆಗೆದು ಆ ಜಾಗವನ್ನು ಹರಾಜು ಮಾಡಿದರೆ ಸುಮಾರು ೫೦ ಕೋಟಿ, ೬೦ ಕೋಟಿ ಅಥವಾ ೭೦ ಕೋಟಿ ಬರಬಹುದು. ಆ ಹಣವನ್ನು ಉಪಯೋಗಿಸಿ ಕೊಂಡು ಸಿಟಿಯಿಂದ ಹೊರಗಡೆ ಒಳ್ಳೆಯ ಮಾಡ್ರನ್ ಟೆಕ್ಸ್‌ಟೈಲ್ ಮಿಲ್ ಹಾಕುವುದಾದರೆ ಬಹಳ ಸೂಕ್ತವಾದೀತು. ಆದ್ದರಿಂದ ಮುಂದೆ ಆಗತಕ್ಕ ನಷ್ಟ ತಪ್ಪುತ್ತದೆ. ಒಳ್ಳೆಯ ಮಾಡ್ರನ್ ಟೆಕ್ಸ್‌ಟೈಲ್ ಮಿಲ್ ಹಾಕಿದರೆ ಒಳ್ಳೆಯ ಕ್ವಾಲಿಟಿ ಬಟ್ಟೆಗಳನ್ನು ತಯಾರಿಸಬಹುದು. ಅವುಗಳನ್ನು ಎಕ್ಸ್‌ಪೋರ್ಟ್ ಮಾಡಬಹುದು. ಕಡಿಮೆ ಕಾಸ್ಟ್‌ನಲ್ಲಿ ಒಳ್ಳೆಯ ಬಟ್ಟೆಯನ್ನು ತಯಾರು ಮಾಡಬಹುದು. ಈ ವಿಚಾರವನ್ನು ಎಕ್ಸಾಮಿನ್ ಮಾಡಿ ಎಂದು ಎನ್.ಟಿ.ಸಿ.ಗೆ ಮತ್ತು ಕೇಂದ್ರಸರ್ಕಾರಕ್ಕೆ ನಾವು ಬರೆಯುತ್ತೇವೆ.

iii) ಚಾಮರಾಜನಗರ ಹಾಗೂ ರಾಮಸಮುದ್ರದಲ್ಲಿ ಕಂಡಿಯುವ ನೀರಿನ ಅಭಾವವನ್ನು ನೀಗಿಸಲು ಕಾವೇರಿ ಯೋಜನೆಯನ್ನು ತ್ವರಿತವಾಗಿ ಕೈಗೊಳ್ಳುವ ಬಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಹಾಗೂ ರಾಮಸಮುದ್ರದಲ್ಲಿ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಾವೇರಿ ಯೋಜನೆಯನ್ನು ತ್ವರಿತವಾಗಿ ಕೈಗೊಳ್ಳುವ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಹೊಸಕೋಟೆ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಪ್ರಸ್ತುತ ಚಾಮರಾಜನಗರದ ಜನಸಂಖ್ಯೆಯು ಸುಮಾರು ೫೦,೦೦೦ವಾಗಿರುತ್ತದೆ. ಈ ನಗರಕ್ಕೆ ನೀರು ಸರಬರಾಜನ್ನು ಸುಮಾರು ೮ ಕಿ. ಮೀ. ದೂರದಲ್ಲಿರುವ ಸುವರ್ಣಾವತಿ ನದಿಯ ನೀರು ಮೂಲ ಸ್ಥಾವರವಾಗಿರುತ್ತದೆ. ಇದಲ್ಲದೆ ಸುಮಾರು ೫೦ ಕೊಳವೆ ಬಾವಿಗಳ ಇಳುವರಿಯು ಮೇರೆಗೆ